ಶ್ರೀ ಶಿವಾನಂದ ಪಾಟೀಲ್ : ಅಧ್ಯಕ್ಷರೇ, ನಾನು ಒಂದು ಪತ್ರ ಕಳುಹಿಸಿದ್ದೇನೆ.

ಅಧ್ಯಕ್ಷರು : ಇಲ್ಲ ಬಿಡಿ. ನೀವು ಮೊದಲನೇ ಸಲ ಅಸೆಂಬ್ಲಿಗೆ ಬಂದಿರಿ. ಈ ಕಡೆ ಬರುತ್ತಲೇ ಇಲ್ಲ. ಸುಮ್ಮನೆ ಇವತ್ತು ಬಂದು ಪತ್ರ ಕಳುಹಿಸಿಕೊಟ್ಟಿದ್ದೇನೆ ಎಂದು ಹೇಳುತ್ತಿದ್ದೀರಿ. ಬೇರೆ ಕಡೆ ಚಟುವಟಿಕೆ ಜಾಸ್ತಿಯಾಗಿಬಿಟ್ಟಿದೆ. ಅಸೆಂಬ್ಲಿಯಲ್ಲಿ ಆಸಕ್ತಿ ಇಲ್ಲ.

ಶ್ರೀ ಜಿ.ಬಿ. ಶಿವಕುಮಾರ್ : ಅಧ್ಯಕ್ಷರೇ....

ಅಧ್ಯಕ್ಷರು : ಪ್ರಶ್ನೆ ಮಾಡಿದ ಸದಸ್ಯರೇ ಇಲ್ಲ. ಜನರಲ್ ರೆಫರೆನ್ಸ್ ಮಾಡಬೇಕಾಗುತ್ತದೆ. ತಾವು ಮಾಡಿ.

ಶ್ರೀ ಚಂದ್ರಶೇಖರ್ ಮಾಮನಿ : ಎಲ್ಲರಿಗೂ ಇದ್ದಂಥ ತೊಂದರೆ ಸನ್ಮಾನ್ಯ ಅಧ್ಯಕ್ಷರೇ. ಬಹಳ ತೊಂದರೆಯಾಗಿಬಿಟ್ಟಿದೆ.

ಅಧ್ಯಕ್ಷರು : ಹೋಗಲಿ, ಒಂದು ಕೆಲಸ ಮಾಡೋಣ. ಅದನ್ನು ಪ್ರತ್ಯೇಕವಾಗಿ .....

ಶ್ರೀ ಚಂದ್ರಶೇಖರ ಮಾಮನಿ : ಗ್ರಾಮೀಣ ಪ್ರದೇಶದಲ್ಲಿದ್ದಂಥ.....

ಶ್ರೀ ಜಿ.ಬಿ. ಶಿವಕುಮಾರ್ : 9 ತಿಂಗಳಿಂದ ಒಂದು ಬಸ್ ಓಡಿಸುವುದಕ್ಕಾಗಲಿಲ್ಲ ನನ್ನ ಕ್ಷೇತ್ರದಲ್ಲಿ. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ತುಂಬಾ ತೊಂದರೆಯಾಗಿದೆ. ತಾವು ದಯಮಾಡಿ ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ದಯಮಾಡಿ ಕೇಳಿ. ಈ ಪ್ರಶ್ನೆಯನ್ನು ಹೆಲ್ಡ್ ಅಪ್ ಮಾಡಿ ನಾಳೆಗೆ ಹಾಕಿಕೊಳ್ಳೋಣ. ಬಿಡಿ. ಟೈಮ್ ಆಗುತ್ತಿದೆ. ನಾಳೆಗೆ ಟ್ರಾನ್ಸಫರ್ ಮಾಡಿಕೊಳ್ಳೋಣ. ನಾಳೆ ತೆಗೆದುಕೊಳ್ಳೋಣ. ಈಗ ವಿಶ್ವೇಶ್ವರ ಹೆಗಡೆಯವರು ತಮ್ಮ ಪ್ರಶ್ನೆಯನ್ನು ಕೇಳಬೇಕು.

ಬರ ಕಾಮಗಾರಿಗಾಗಿ ಉತ್ತರ ಕನ್ನಡ ಜಿಲ್ಲೆಗೆ ನೀಡಿದ ಹಣ

330 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬರ ಕಾಮಗಾರಿಗೆ ಉತ್ತರ ಕನ್ನಡ ಜಿಲ್ಲೆಗೆ ನೀಡಿದ ಹಣವೆಷ್ಟು ?

ಆ) ತಾಲ್ಲೂಕುವಾರು ನೀಡಿದ ಹಣದಲ್ಲಿ ವಿಂಗಡಣೆ ಯಾವ ರೀತಿಯಲ್ಲಿದೆ ?

ಇ) ಬರಕಾಮಗಾರಿಗೆ ಉತ್ತರ ಕನ್ನಡ ಜಿಲ್ಲೆಗೆ ಒಟ್ಟು ನೀಡುವ ಹಣವೆಷ್ಟು ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರ ಕೆಳಕಂಡಂತಿದೆ -

(ರೂ. ಲಕ್ಷಗಳಲ್ಲಿ)

		ಸಿಆರ್‌ಎಫ್	ಆರಡಿಪಿಆರ್
1.	ಕುಡಿಯುವ ನೀರು	60.00	199.78
2.	ಉದ್ಯೋಗ ಸೃಜನೆ	75.00	175.82
3.	ಮೇವು ಸರಬರಾಜು	5.00	-
	ಒಟ್ಟು	140.00	375.60

ಆ) ಉದ್ಯೋಗ ಭರವಸೆ ಯೋಜನೆ : ಜವಹಾರ್ ರೋಜಗಾರ್ ಯೋಜನೆಯ ಏನೇ ವಾಹಿನಿಯ ವ್ಯಾಪ್ತಿಯೊಳಗೆ ಬರದಿರುವ ಮಳೆ ಕೊರತೆ ಇದ್ದ ತಾಲ್ಲೂಕುಗಳಿಗೆ, ಪ್ರತಿ ತಾಲ್ಲೂಕಿಗೆ 12.50 ಲಕ್ಷದಂತೆ 'ಪ್ರಕೃತಿ ವಿಕೋಪ ಪರಿಹಾರ ನಿಧಿ'ಯಿಂದ ಮೊದಲು ಕಂತಿನ ಹಣವನ್ನು ಬಿಡುಗಡೆ ಮಾಡಲಾಗಿದೆ. ಅನುದಾನದ ವಿಂಗಡಣೆ ಕೆಳಕಂಡಂತಿದೆ -

(ರೂ. ಲಕ್ಷಗಳಲ್ಲಿ)

ತಾಲ್ಲೂಕಿನ ಹೆಸರು		ಕುಡಿಯುವ ನೀರು		ಉದ್ಯೋಗ ಸೃಜನೆ	
		ಸಿಆರ್‌ಎಫ್	ಆರಡಿಪಿಆರ್	ಸಿಆರ್‌ಎಫ್	ಆರಡಿಪಿಆರ್
1.	ಕಾರವಾರ	1.28	9.00	-	41.12
2.	ಅಂಕೋಲ	1.90	10.58	-	5.37
3.	ಕುಮಟಾ	4.40	12.99	-	17.30
4.	ಹೊನ್ನಾವರ	1.70	7.30	-	10.67
5.	ಭಟ್ಕಳ	1.80	3.38	-	20.90
6.	ಶಿರಸಿ	3.55	4.12	12.50	33.94
7.	ಹಳಿಯಾಳ	5.00	4.10	12.50	10.83
8.	ಸಿದ್ದಾಪುರ	-	2.48	12.50	7.72
9.	ಯಲ್ಲಾಪುರ	-	2.61	12.50	8.54
10.	ಮುಂಡಗೋಡ್	-	2.86	12.50	11.73
11.	ಸೂಪ	-	4.72	12.50	7.70
	ಒಟ್ಟು	**19.63**	**64.14**	**75.00**	**175.82**

೫) ಪರಿಸ್ಥಿತಿಗನುಗುಣವಾಗಿ, ಅವಶ್ಯಕತೆಯನ್ನು ಗಮನಿಸಿ ಹಣವನ್ನು ಒದಗಿಸಲಾಗುವುದು.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಅಧ್ಯಕ್ಷರೇ, ಇದರಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಉತ್ತರ ಕನ್ನಡ ಜಿಲ್ಲೆಯ ಆರು ತಾಲ್ಲೂಕುಗಳಿಗೆ ಮಳೆ ಕಡಿಮೆಯಾಗಿದೆ ಎಂದು ಹಣವನ್ನು ಕೊಟ್ಟಿದ್ದಾರೆ ಸಂತೋಷ. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಆರ್.ವಿ. ದೇಶಪಾಂಡೆಯವರು ಇಲ್ಲೇ ಇದ್ದಾರೆ. ಉಳಿದ ಐದು ತಾಲ್ಲೂಕುಗಳಲ್ಲಿ ಪ್ರಕೃತಿ ವಿಕೋಪ ಅತಿಯಾಗಿ ಆಗಿದೆ. ಕಂದಾಯ ಸಚಿವರು ದಯವಿಟ್ಟು ಕೇಳಬೇಕು. ಉಳಿದ ಐದು ತಾಲ್ಲೂಕುಗಳಲ್ಲೂ ಪ್ರಕೃತಿ ವಿಕೋಪ ಅತಿಯಾಗಿ ಆಗಿದೆ. ಅತಿವೃಷ್ಟಿಯಿಂದಾಗಿ ಸೇತುವೆಗಳು ಕುಸಿದುಬಿದ್ದಿವೆ. ರಸ್ತೆಗಳು ಹಾಳಾಗಿಹೋಗಿವೆ. ಕೆರೆಕಟ್ಟೆಗಳು ಒಡೆದುಹೋಗಿವೆ. ಹಾಗಾಗಿ ಉಳಿದ ಐದು ತಾಲ್ಲೂಕುಗಳಿಗೂ ತಾವು ದಯವಿಟ್ಟು ಹೆಚ್ಚಿನ ಹಣವನ್ನು ತಕ್ಷಣದಲ್ಲಿ ಮಂಜೂರು ಮಾಡುತ್ತೀರಾ? ಇದು ಮೊದಲನೆಯದು. ಇನ್ನು ಎರಡು ಉಪಪ್ರಶ್ನೆ ಅಂದರೆ ಈಗ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದೀರಿ. ಈಗ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಸೂಚಿಸಿರುವ ಕೆಲಸ ಕಾಮಗಾರಿಗಳು ಆಗಬೇಕೋ ಅಥವಾ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಹೇಳಿರುವ ಕೆಲಸ ಕಾಮಗಾರಿಗಳನ್ನೂ ಕೈಗೆತ್ತಿಕೊಳ್ಳಬಹುದೋ ಅಥವಾ ಸಮಿತಿ ಸಭೆಯಲ್ಲಿ ಆಗಿರುವ ಕೆಲಸಕಾರ್ಯಗಳು ಆಗಬೇಕೋ; ಮೂರನೆಯದಾಗಿ ನಗರ ಪ್ರದೇಶಗಳಿಗೆ ಈ ಹಣದಿಂದ ಖರ್ಚು ಮಾಡುವುದಕ್ಕೆ ಯಾವ ಮಾರ್ಗಸೂಚಿ ಕಳುಹಿಸಿದ್ದೀರಿ? ಪಟ್ಟಣ ಪ್ರದೇಶ ಮತ್ತು ನಗರಪ್ರದೇಶಗಳಿಗೆ ಇದರಿಂದ ನಾವು ಹಣವನ್ನು ಖರ್ಚು ಮಾಡುವುದಕ್ಕೆ ನೀವು ಯಾವರೀತಿ ಮಾರ್ಗದರ್ಶಿ ಸೂಚಿಯನ್ನು ಕಳುಹಿಸಿದ್ದೀರಿ?

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ, ಬರಪರಿಹಾರದ ಬಗ್ಗೆ ಚರ್ಚೆಯಾದಾಗ ದೀರ್ಘವಾಗಿ ಇದರ ಬಗ್ಗೆ ಚರ್ಚೆಯಾಗಿದೆ. ಮತ್ತು ತಾಲ್ಲೂಕು ಸಮಿತಿಗಳ ಹಕುಬಾಧ್ಯತೆಗಳು ಏನು ಎಂಬುದನ್ನೂ ಕೂಡ ಅವತ್ತು ಹೇಳಿದ್ದೇವೆ. ಈ ಆರು ತಾಲ್ಲೂಕುಗಳಲ್ಲಿ ಎಂಪ್ಲಾಯ್ಮೆಂಟ್ ಆಫರ್ಮೇಷನ್ ಸ್ಕೀಮ್ ಇಲ್ಲ, ರೋಜಗಾರ್ ಇಲ್ಲ, ಆದ್ದರಿಂದ ಒಂದೊಂದು ತಾಲ್ಲೂಕಿಗೆ 25 ಲಕ್ಷ ರೂಪಾಯಿ ಕೊಡಬೇಕು ಎಂದು ತೀರ್ಮಾನ ಮಾಡಿ ಮೊದಲನೆಯ ಕಂತಾಗಿ ಹನ್ನೆರಡೂವರೆ ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಐದು ರೂಪಾಯಿಯನ್ನೂ ಖರ್ಚುಮಾಡಿಲ್ಲ ಅಲ್ಲಿ. ಕಾರಣ ಏನೆಂದರೆ ಆಗಸ್ಟ ತಿಂಗಳಿಂದ ಈಚೆಗೆ ಧಾರಾಕಾರವಾಗಿ ಮಳೆ ಸುರಿಯುತ್ತದೆ. ಅಲ್ಲಿನ ಉಸ್ತುವಾರಿ ಮಂತ್ರಿಗಳಾದ ದೇಶಪಾಂಡೆ ಅವರು ಫ್ಲಡ್ ರಿಲೀಫಗೋಸ್ಕರ 76 ಲಕ್ಷ ರೂಪಾಯಿ ಬೇಕು ಎಂದು ಪತ್ರ ಕಳುಹಿಸಿದ್ದಾರೆ. ಅದು ಈಗ ಪರಿಶೀಲನೆಯಲ್ಲಿದೆ. ಮಳೆ ನಿಂತ ತಕ್ಷಣ ರಿಲೀಫ್ ವರ್ಕ್ಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು. ಬೇರೆ ಕಡೆ ಎಂಪ್ಲಾಯ್ಮೆಂಟ್ ಆಫರ್ಮೇಷನ್ ಸ್ಕೀಮ್ ಅದೆಲ್ಲಾ ಇದೆ. ಆದರೆ ಈ ಆರು ತಾಲ್ಲೂಕುಗಳಲ್ಲಿ ಏನೂ ಇಲ್ಲ. ಅಲ್ಲಿ ಮಾತ್ರ 25-25 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಹೆಚ್ಚಿಗೆ ಹಣ ಬೇಕಾದರೆ ನಾವು ಅದನ್ನು ಕೊಡುವುದಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಎಸ್. ಕೃಷ್ಣಪ್ಪ : ಅಧ್ಯಕ್ಷರೇ, ಟೀನರಸೀಪುರ ತಾಲ್ಲೂಕಿಗೆ ಏನೂ ಕೊಟ್ಟಿಲ್ಲ.

ಅಧ್ಯಕ್ಷರು : ಪ್ರಶ್ನೆ ಕೇಳಿರುವವರು ಉಪಪ್ರಶ್ನೆ ಕೇಳುವುದು ಬೇಡವೇ?

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಶಾಸಕರ ಅಧ್ಯಕ್ಷತೆಯಲ್ಲಿನ ಸಭೆಯಲ್ಲಿ ಶಿಫಾರಸ್ಸು ಮಾಡಿರುವ ಕೆಲಸ ಕಾಮಗಾರಿಗಳನ್ನೇ ತೆಗೆದುಕೊಳ್ಳಬೇಕೋ? ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಶಿಫಾರಸ್ಸು ಮಾಡಿರುವ ಕೆಲಸವನ್ನು ತೆಗೆದುಕೊಳ್ಳಬಹುದೋ?

ಶ್ರೀ ಆರ್.ಎಲ್. ಜಾಲಪ್ಪ : ಈ ಆರು ತಾಲ್ಲೂಕುಗಳಲ್ಲಿ ಎಂಪ್ಲಾಯ್ಮೆಂಟ್ ಅಫರ್ಮೇಷನ್ ಸ್ಕೀಂ ಆಗಲೀ ಅಥವಾ ರೋಜಗಾರ್ ಯೋಜನೆ ಆಗಲೀ ಇಲ್ಲ. ಆದ್ದರಿಂದ ತಾಲ್ಲೂಕು ಅಧ್ಯಕ್ಷರು ಹೇಳಿದ ಕೆಲಸವನ್ನೇ ತೆಗೆದುಕೊಳ್ಳಬೇಕಾಗುತ್ತದೆ. ಆ ಸ್ಕೀಮಗಳು ಇರುವ ಕಡೆ ಅವರು ಆಕ್ಷನ್ ಪ್ಲಾನ್ ಅದೆಲ್ಲಾ ಮಾಡಿರುತ್ತಾರೆ. ಅದರ ಮೇಲೆ ಹೋಗುತ್ತದೆ. ಮತ್ತು ಅಡಿಶನಲ್ ಫಂಡ್ಸ ಏನಾದರೂ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಲ್ಲ ಸಾರ್. 224 ಕ್ಷೇತ್ರಕ್ಕೂ ಸಂಬಂಧಪಟ್ಟಂತೆ ತಾವೇ ಬರಗಾಲ ಕಾಮಗಾರಿ ಅತಿವೃಷ್ಟಿ ಕಾರ್ಯಗಳ ಉಸ್ತುವಾರಿ ಮಾಡುವುದಕ್ಕೆ ಸಮಿತಿ ಮಾಡಿದ್ದೀರಲ್ಲ ಆ ಸಮಿತಿಯಲ್ಲಿ ಎಲ್ಲರನ್ನೂ ತಾವೇ ನೇಮಕ ಮಾಡಿದ್ದೀರಿ. ಆ ಸಮಿತಿಯಲ್ಲಿ ಯಾವ ಕೆಲಸ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಒಂದು ಪಟ್ಟಿ ಮಾಡುತ್ತೇವೆ. ಅದನ್ನೇ ಕಾರ್ಯರೂಪಕ್ಕೆ ತರಬೇಕು; ಮತ್ತೆ ಇದರಲ್ಲಿ ಬೇರೆ ಯಾವುದನ್ನಾದರೂ ತೂರಿಸುವುದು ಬೇರೆಯವರು ಪ್ರವೇಶ ಮಾಡುವುದು ಇದಾಗದಂತೆ ನೋಡಿಕೊಳ್ಳುತ್ತೀರಾ ಎಂದು ಒಂದು ನೇರವಾದ ಪ್ರಶ್ನೆ.

ಶ್ರೀ ಆರ್.ಎಲ್. ಜಾಲಪ್ಪ : ಇದು ನಮ್ಮ ಗಮನಕ್ಕೆ ಬಂದಿಲ್ಲ. ಯಾವುದೂ ತೂರಿಸುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಆಗಿದೆ. ನನ್ನ ಕ್ಷೇತ್ರದ ಯಲ್ಲಾಪುರ ತಾಲ್ಲೂಕಿನಲ್ಲಿ ಹಾಗೆ ಆಗಿದೆ. ನಾವು ಸಮಿತಿಯಲ್ಲಿ ಮಾಡಿದಂತೆ ಆಗಿಲ್ಲ. ಅಲ್ಲಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಯಾವುದನ್ನು ಕಳುಹಿಸಿದ್ದಾರೋ ಅದನ್ನು ಶಿಫಾರಸ್ಸು ಮಾಡಿದ್ದಾರೆ. ಅದು ಹಾಗಾಗದಂತೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಈಗಾತಾನೇ ಒಂದು ವಿಚಾರ ಹೇಳಿದರು, ಬೇರೆ ಅದರಲ್ಲಿ ತೋರಿಸುವುದಕ್ಕೆ ಬರುವುದಿಲ್ಲ ಅಂತ ಹೇಳಿ. ಸಕಲೇಶಪುರ ತಾಲ್ಲೂಕಿನಲ್ಲಿ ತಾಲ್ಲೂಕು ಪಂಚಾಯಿತಿ ಸೇರಿ ಮಾಡಿದಂಥ ಪಟ್ಟಿಯನ್ನು ಸಂಪೂರ್ಣ ಬದಲಾಯಿಸಿ ಮಾಡಿಫೈ ಮಾಡಿದಂಥ ಪಟ್ಟಿಯನ್ನೂ ಬದಲಾಯಿಸಿ ಎರಡಕ್ಕೂ ಸಂಬಂಧ ಇಲ್ಲದೇ ಇರತಕ್ಕಂಥ ಮೂರನೇ ಒಂದು ಪಟ್ಟಿ ಮಾಡಿ ಇವತ್ತು ಆದೇಶ ಕೊಟ್ಟಿರತಕ್ಕಂಥದ್ದನ್ನು ಮೊನ್ನೆ ನಾನು ಸಂಬಂಧಪಟ್ಟಂಥ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇದು ನಡೆಯುತ್ತಾ ಇದೆ. ಅದಕ್ಕೋಸ್ಕರ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ನನ್ನ ಗಮನಕ್ಕೆ ಶಿವಪ್ಪನವರು ಈಗಾಗಲೇ ತಂದಿದ್ದಾರೆ ಇದನ್ನು. ನಾನು ನಮ್ಮ ಕಾರ್ಯದರ್ಶಿಯವರಿಗೆ ಹೇಳಿದ್ದೇನೆ ಡೆಪ್ಯುಟಿ ಕಮಿಷನರ್ ಅವರನ್ನು ಕಾಂಟ್ಯಾಕ್ಟ ಮಾಡಿ ವಸ್ತುಸ್ಥಿತಿ ಏನು ಮತ್ತು ಏತಕ್ಕೆ ಹೀಗೆಲ್ಲಾ ಮಾಡಿದ್ದಾರೆ ಕೇಳಿ ಎಂದು ಹೇಳಿದ್ದೇನೆ. ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಒಂದು ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡುತ್ತೇನೆ, ತಾವು ರಿಸೈನ್ ಮಾಡುವುದು

ಬೇಡ. ತಾವು ಅಲ್ಲಿರಬೇಕು. ತಾವಿದ್ದು ಆ[illegible] ಕಾರ್ಯಗಳನ್ನು ನಡೆಸಬೇಕು. ತಮ್ಮ ಅಧಿಕಾರ ಏನಿದೆ ಅದಕ್ಕೆ ಕುಂದು ಬರದಹಾಗೆ ನೋಡಿಕೊಳ್ಳುವುದಕ್ಕೆ ನಾನು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನಲ್ಲಿ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ ಬಿದ್ದಂಥ ಮಳೆಯ ಪ್ರಮಾಣ ಕಡಿಮೆ ಇದ್ದರೂ ಕೂಡ ಮೊನ್ನೆ ನಮ್ಮ ಕಂದಾಯ ಸಚಿವರು ಕೊಟ್ಟಂಥ ಬರಗಾಲದ ವರದಿಯಲ್ಲಿ ಕಡೂರು ತಾಲ್ಲೂಕಿನಲ್ಲಿ.....

ಅಧ್ಯಕ್ಷರು : ಕೃಷ್ಣಮೂರ್ತಿ, ಒಂದು ನಿಮಿಷ ದಯವಾಡಿ ಕೇಳಿ ಇಲ್ಲಿ. ತಾವು ಜಿಲ್ಲಾಪರಿಷತ್ತಿನ ಚೇರಮನ್ ಆಗಿ ಕೆಲಸ ಮಾಡಿದ್ದೀರಿ. ಪ್ರಶ್ನೋತ್ತರ ಚರ್ಚೆಗೆ ತೆಗೆದುಕೊಂಡಿದ್ದೇವೆ. ಅವರು ಅವರ ತಾಲ್ಲೂಕಿಗೆ ಸಂಬಂಧಿಸಿದ ಹಾಗೆ ಪ್ರಶ್ನೆ ಕೇಳುತ್ತಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅದನ್ನೇ ನಾನು ಕೇಳುತ್ತಿರುವುದು.

ಅಧ್ಯಕ್ಷರು : ಜನರಲ್ ನೇಚರದ್ದು ಕೇಳಿ; ಎಲ್ಲರೂ ಎಲ್ಲಾ ಹೋಬಳಿದು, ಪಂಚಾಯತಿಯದು ಕೇಳಿ ಅವರು ಕಂಪ್ಯೂಟರು ರೊಬೊಟೋಸ್ ಎಲ್ಲಾ ಇಟ್ಟು ಕೊಂಡಿದ್ದಾರೆ ನಿಮಗೆ ಉತ್ತರ ಹೇಳುವುದಕ್ಕೆ.

ಅಧ್ಯಕ್ಷರು : ಡಾ. ಯು. ಚಿತ್ತರಂಜನ್ ಏನೋ ಕೇಳುತ್ತಾರೆ. ಜನರಲ್ ನೇಚರದ್ದು ಕೇಳಬೇಕು. ನಿಮ್ಮ ತಾಲ್ಲೂಕು ಪರ್ಟಿಕ್ಯುಲರ್ಸ್ ಕೇಳಿದರೆ, ನಿಮ್ಮ ತಾಲ್ಲೂಕು ಪರ್ಟಿಕ್ಯುಲರ್ಸ್‌ಗೆ ಅವರು ಪ್ರಿಪೇರ್ ಆಗಿ ಬಂದಿರುತ್ತಾರೆ ಹೇಳಿ. ಪ್ರಶ್ನೆ ಅದು ಇದೆಯಾ? How should he answer?

ಕೆ.ಎಂ. ಕೃಷ್ಣಮೂರ್ತಿ : ಅವರ ಗಮನಕ್ಕೆ ತಂದಿದ್ದೇನೆ ಅಧ್ಯಕ್ಷರೆ. ಅದಕ್ಕೋಸ್ಕರ.....

ಡಾ : ಯು. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರನ್ನು ವಿನಂತಿಸುವುದೇನೆಂದರೆ ನಮ್ಮ 5 ಕರಾವಳಿ ತಾಲ್ಲೂಕುಗಳಲ್ಲಿ ಮಳೆಯಿಂದಾದಂಥ ಹಾನಿ ತೀವ್ರವಾಗಿದೆ. ಕೆಲವು ಆಸ್ಪತ್ರೆಗಳ ಮಹಡಿ ಕುಸಿದಿವೆ. ಉದಾಹರಣೆಗೆ ಭಟ್ಕಳ ತಾಲ್ಲೂಕಿಗೆ ನಗರಕ್ಕೆ ಬರುವಂಥ ಮುಖ್ಯ ಒಂದು ಸೇತುವೆ ಕುಸಿದು ಬಿದ್ದಿದೆ. ಗ್ರಾಮಾಂತರದಿಂದ ಬರುವುದನ್ನು ಸ್ವತಃ ನಮ್ಮ ಉಸ್ತುವಾರಿ ಮಂತ್ರಿಗಳೇ ವೀಕ್ಷಿಸಿದ್ದಾರೆ. ಅದು ಒಂದೇ ಸೇತುವೆಯನ್ನು ರಿಪೇರಿ ಮಾಡಿಸಬೇಕಾದರೆ ಕನಿಷ್ಠ 20 ಲಕ್ಷ ರೂಪಾಯಿಬೇಕು. ಮತ್ತು ಅನೇಕ ಕಡೆಗಳಲ್ಲಿ ಸಮುದ್ರ ಕೊರೆತದಿಂದ ಏನಾಗಿದೆ ಎಂದರೆ ಅನೇಕ ರಸ್ತೆಗಳು ಕೊರೆದು ಹೋಗಿದೆ. ಅನೇಕ ಸಂಪರ್ಕಗಳು ಕಡಿದುಹೋಗಿವೆ. ಸಮುದ್ರ ಕೊರೆತವನ್ನು ತಡೆಗಟ್ಟಲು ಬೇಕಾದಂಥ ಹಣ ಬರುತ್ತಿಲ್ಲ. ಇದಕ್ಕೆ ತುರ್ತಾಗಿ ಹಣ ಒದಗಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ, ಮುಖ್ಯಮಂತ್ರಿಗಳಿಗೆ ಒಂದು ಮನವಿಯನ್ನು ಕೂಡ ಕೊಟ್ಟಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಸಂಬಂಧಪಟ್ಟ ಮಂತ್ರಿಗಳೂ ಕೂಡ 74 ಲಕ್ಷ ರೂ. ಫಂಡ್ ರಿಲೀಫ್‌ಗೆ ಈ ವರ್ಷ ಬೇಕು ಎಂದು ಹೇಳಿದ್ದಾರೆ. ಅದನ್ನು ಸಹ ಒದಗಿಸುತ್ತೇವೆ. ಎಷ್ಟು ಸಾಧ್ಯವೋ

ಅಷ್ಟನ್ನು ಒದಗಿಸುತ್ತೇವೆ. ತಹಸೀಲ್ದಾರು ಮಳೆ ಹೇಗೆ ಬಿದ್ದಿದೆ ಎಂಬ ಬಗ್ಗೆ ರಿಪೋರ್ಟ್ ಕಳುಹಿಸುತ್ತಾರೆ. ಅದರ ಮೇಲೆ ನಾವು ಶೇಕಡಾ 40 ಪರ್ಸೆಂಟ್‌ಗಿಂತ ಒಳಗಿದ್ದರೆ ಮಳೆ ಅಂತಹ ಸಮಯದಲ್ಲಿ ಹೆಚ್ಚಿನ ರಿಲೀಫ್ ನಾವು ಪ್ರೊವೈಡ್ ಮಾಡಬೇಕು. ಆದರೆ ಮಾನ್ಯ ಕೃಷ್ಣಮೂರ್ತಿಯವರ ತಾಲ್ಲೂಕು ಒಳಗಿರುವುದರಿಂದ ಅದು ಬಂದಿಲ್ಲ. ಏನಾದರೂ ತೊಂದರೆ ಇದ್ದರೆ ತೀರ್ಮಾನ ಮಾಡೋಣ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮೊನ್ನೆ ಕಂದಾಯ ಸಚಿವರು ಕೊಟ್ಟಂಥ ಬರಗಾಲದ ವರದಿಯಲ್ಲಿ ಕಡೂರು ತಾಲ್ಲೂಕಿನಲ್ಲಿ ಕಡಿಮೆ ಬಿದ್ದಂಥ.....

ಅಧ್ಯಕ್ಷರು : ನಾನು ಈಗ ಏನು ಮಾಡಲಿ ಹೇಳಿ. ನೀವೆಲ್ಲಾ ಸೇರಿ ನನ್ನನ್ನು ಇಲ್ಲಿಗೆ ಕೂರಿಸಿದ್ದೀರಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಬರಗಾಲಕ್ಕೆ ಸೇರಿಸಬೇಕು ಅಷ್ಟೇ. ಇಲ್ಲಿಯವರಿಗೆ ಕಡೂರು ತಾಲ್ಲೂಕಿನಲ್ಲಿ ಮಳೆ ಬಂದಿಲ್ಲ. ಅಲ್ಲಿ ಕುಡಿಯುವ ನೀರಿನ ತೊಂದರೆಯಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿ, ಅಲ್ಲಿ ಅವಶ್ಯಕತೆಗೆ ತಕ್ಕಂತೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಶ್ರೀ ಆರ್. ಕೃಷ್ಣಪ್ಪನವರು.

ಶ್ರೀ ಆರ್. ಕೃಷ್ಣಪ್ಪ : ಪ್ರಶ್ನೆ ಸಂಖ್ಯೆ 3739ನೇ ಪ್ರಶ್ನೆಯನ್ನು ಕೇಳುತ್ತೇನೆ.

ಅಧ್ಯಕ್ಷರು : ಸಾರಿಗೆ ಮಂತ್ರಿಗಳು ಯಾಪ ಕಡೆ ಹೋದರು? ಪಾಪ ಮೊದಲು ಕರೆದಾಗ ಅವರು ಇರಲಿಲ್ಲ. ನಾವು ಅಡ್ಜಸ್ಟ್ ಮಾಡಿಕೊಳ್ಳಬೇಕಲ್ಲಾ. ಅವರಿಗೂ ಪಾಪ ಬೇರೆ ಬೇರೆ ಎಷ್ಟೋ ಕೆಲಸಗಳು ಇರುತ್ತವೆ. ಸದಸ್ಯರಿಗೆ ಸಾಕಷ್ಟು ಕೆಲಸಕಾರ್ಯಗಳು ಇರುತ್ತವೆ. ನಾವು ಸ್ವಲ್ಪ ಅಡ್ಜಸ್ಟ್ ಮಾಡಿಕೊಂಡು ಹೋಗಬೇಕು. ಅದು ನನ್ನ ಡ್ಯೂಟಿ. ಆದ್ದರಿಂದ ಅವರು ಯಾವಾಗ ಬಂದರೂ ನಾನು ಕರೆಯಬೇಕು. ಕರೆಯುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಸಾಮಾನ್ಯವಾಗಿ ಆ ಅಭ್ಯಾಸ ಇರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರಿಗೆ ಈ ಅಧಿಕಾರ ವಿಶೇಷ ಸಂದರ್ಭದಲ್ಲಿ ಇದೆ.

ಶ್ರೀ ಸಿ. ಬೈರೇಗೌಡ : ಇರಲಿಲ್ಲ ಎಂದು ನಾನು ಹೇಳಿದ್ದು.

ಅಧ್ಯಕ್ಷರು : ಆಯಿತು. ನಾಳೆ ಟೇಬಲ್ ಮಾಡೋಣ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ ಮಂಡನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : 14.9.95ರ 22ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 44 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.